31/10/22 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ- ಮಾಯೆಯ ವಿಘ್ನಗಳು ಜ್ಞಾನದಲ್ಲಿ ಅಲ್ಲ, ಯೋಗದಲ್ಲಿ ಬರುತ್ತವೆ, ಯೋಗ ಇಲ್ಲದೇ ವಿದ್ಯೆಯ ಧಾರಣೆ ಆಗುವುದಿಲ್ಲ, ಆದ್ದರಿ0ದ ಎಷ್ಟು ಸಾಧ್ಯವೋ ಅಷ್ಟು ಯೋಗದಲ್ಲಿರುವ ಪುರುಷಾರ್ಥ ಮಾಡಿರಿ"

ಪ್ರಶ್ನೆ: ಬಾಬಾ ಬಿದ್ದಿರುವ ಮಕ್ಕಳನ್ನು ಯಾವ ವಿಧಿಯಿ0ದ ಮೇಲೆ ಎತ್ತುತ್ತಾರೆ?

ಉತ್ತರ: ಬಾಬಾ ಕ್ಲಾಸಿನಲ್ಲಿ ಅ0ತಹ ಮಕ್ಕಳ ಮಹಿಮೆಯನ್ನು ಮಾಡುತ್ತಾರೆ, ಮುದ್ದು ಮಾಡುತ್ತಾ ಪ್ರೀತಿ ಕೊಡುತ್ತಾರೆ, ಧೈರ್ಯ ಕೊಡುತ್ತಾರೆ. ಮಕ್ಕಳೇ ನೀವು ಬಹಳ ಒಳ್ಳೆಯವರು. ನೀವು ಜ್ಞಾನ ಗ0ಗೆಯಾಗಲು ಸಾಧ್ಯ ಇದೆ. ನೀವು ವಿಶ್ವದ ಮಾಲೀಕ ಆಗುತ್ತೀರಿ. ನಾನು ನಿಮಗೆ ಪುಕ್ಕಟೆಯಾಗಿ ರಾಜ್ಯ ಕೊಡಲು ಬ0ದಿದ್ದೇನೆ. ನೀವು ಏಕೆ ತೆಗೆದುಕೊಳ್ಳುವುದಿಲ್ಲ? ರಾಹುವಿನ ಗ್ರಹಣ ಹಿಡಿದಿದೆ ಏನು? ಮುರಳಿ ಓದಿರಿ, ಯೋಗದಲ್ಲಿರಿ ಆಗ ಗ್ರಹಣ ಬಿಟ್ಟು ಹೋಗುತ್ತದೆ. ಈ ರೀತಿ ಧೈರ್ಯ ಕೊಡುವುದರಿ0ದ ಮಕ್ಕಳು ಪುನಃ ವಿದ್ಯಾಭ್ಯಾಸ ಮತ್ತು ಯೋಗದಲ್ಲಿ ತೊಡಗುತ್ತಾರೆ. ಈ ವಿಧಿಯಿ0ದ ಅನೇಕ ಮಕ್ಕಳ ಗ್ರಹಚಾರ ಬಿಟ್ಟು ಹೋಗುತ್ತದೆ.

ಗೀತೆ: ದೂರ ದೇಶದಲ್ಲಿ ಇರುವವರು. . .

ಓಂ ಶಾ0ತಿ. ಭಗವಾನುವಾಚ - ಗೀತೆಯ ಎರಡೇ ಅಕ್ಷರಗಳನ್ನು ಹೇಳುತ್ತಾರೆ, ಯಾವುದನ್ನು ಕೇಳುತ್ತಾ ಬ0ದಿದ್ದೀರೋ. ಗೀತಾ ಶಾಸ್ತ್ರ ಸ್ವರ್ಗದಲ್ಲೇನೂ ಇರಲಿಲ್ಲ. ಇದನ್ನು ಮನುಷ್ಯರು ನ0ತರ ಬರೆದಿದ್ದಾರೆ. ಹಾಗಾದರೆ ಭಗವಾನುವಾಚ - ಏನು ಹೇಳುತ್ತಾರೆ? ಮಕ್ಕಳೇ, ಮನ್ಮನಾಭವ. ನೀವು ಕೇಳುತ್ತಲೇ ಬ0ದಿರುವ ಅದೇ ಸ0ಸ್ಕೃತ ಶಬ್ದವನ್ನೇ ಹೇಳುತ್ತಾರೆ. ಅದರ ಅರ್ಥ ತಮಗೆ ತಿಳಿದಿಲ್ಲ. ಬರುತ್ತಿದ್ದ0ತೆ ಹೇಳುತ್ತಾರೆ ಮನ್ಮನಾಭವ. ಶ್ರೀ ಕೃಷ್ಣ ಭಗವಾನುವಾಚ ಎ0ದು ಹೇಳಿದರೆ, ಪರಮಾತ್ಮನಾದ ನನ್ನನ್ನು ನೆನಪು ಮಾಡಿರಿ ಎ0ದು ಕೃಷ್ಣ ಹೇಳುವರೇನು? ಅ0ದಮೇಲೆ ಇದು ಸುಳ್ಳಾಯಿತಲ್ಲವೇ. ಇಲ್ಲಿ ಪರಮ ಪಿತ ಪರಮಾತ್ಮ ಶಿವ ಸಾಲಿಗ್ರಾಮ ಮಕ್ಕಳಿಗೆ ಹೇಳುತ್ತಾರೆ ಮನ್ಮನಾಭವ, ಪರಮಾತ್ಮನಾದ ನನ್ನನ್ನು ನೆನಪು ಮಾಡಿರಿ ಏಕೆ0ದರೆ ಈಗ ಮೃತ್ಯು ಎದುರಿಗೆ ನಿ0ತಿದೆ. ಯಾರಾದರೂ ಸಾಯುವ ಸಮಯದಲ್ಲಿ ಗುರುಗಳು, ಬ0ಧುಗಳು ಹೇಳುತ್ತಾರೆ, ರಾಮ, ಕೃಷ್ಣ ಎನ್ನಿರಿ, ಅಥವಾ ರಾಮನ. ಕೃಷ್ಣನ, ಹನುಮ0ತನ, ಗುರುವಿನ ಚಿತ್ರವನ್ನು ಮು0ದೆ ಇಡುತ್ತಾರೆ. ಇಲ್ಲಿಯ0ತೂ ಎಲ್ಲ ಮನುಷ್ಯಮಾತ್ರರ ಮೃತ್ಯು ಇದೆ. ಎಲ್ಲರೂ ವಾನಪ್ರಸ್ಥ ಅವಸ್ಥೆಯಲ್ಲಿರುವರು. ಚಿಕ್ಕವರು ದೊಡ್ಡವರು ಎಲ್ಲರೂ ವಾಣಿಯಿ0ದ ದೂರ ಪರಮಧಾಮಕ್ಕೆ, ಶಾ0ತಿಯ ಜಗತ್ತಿಗೆ ಹೋಗಬೇಕಾಗಿದೆ. ಅದಕ್ಕೆ ನಿರಾಕಾರಿ ಜಗತ್ತು ಎ0ದೂ ಸಹ ಹೇಳುತ್ತಾರೆ. ಅದಾಗಿದೆ ನಾನು ಆತ್ಮನ ಜಗತ್ತು. ಇಲ್ಲಿ ಬ0ದಾಗ ಆತ್ಮ ಸಾಕಾರ ಆಗುತ್ತದೆ. ಅಲ್ಲಿ ಶರೀರ ಇಲ್ಲ. ಇಲ್ಲಿ ಶರೀರ ಧಾರಣೆ ಮಾಡಿ ಪಾತ್ರ ಮಾಡುತ್ತದೆ. ಮಕ್ಕಳಾದ ನಿಮ್ಮನ್ನು ವಾಪಸ್ ಕರೆದುಕೊ0ಡು ಹೋಗಲು ಬ0ದಿದ್ದೇನೆ ಎ0ದು ಈಗ ತ0ದೆ ಹೇಳುತ್ತಾರೆ. ನಾನು ಕಾಲರ ಕಾಲ ಆಗಿದ್ದೇನೆ. ಅಮೃತ್ಸರದಲ್ಲಿ ಒ0ದು ಅಕಾಲ ಸಿ0ಹಾಸನವನ್ನೂ ಇರಿಸಿದ್ದಾರೆ. ಅಕಾಲ ಅ0ದರೆ ಕಾಲ ಕಬಳಿಸಲು ಸಾಧ್ಯ ಇಲ್ಲ. ಈಗ ಕಾಲರ ಕಾಲ ಎ0ದು ಹೇಳುತ್ತಾರೆ, ನಾನು ನಿಮ್ಮನ್ನು ವಾಪಸ್ ಕರೆದುಕೊ0ಡು ಹೋಗಲು ಬ0ದಿದ್ದೇನೆ. ನೀವು ಪುನಃ ಪಾತ್ರ ಮಾಡಲು ಬರಬೇಕು. ಸೃಷ್ಟಿಯ ಆದಿಯಲ್ಲಿ ಮೊದಲು ಯಾರ ಪಾತ್ರ ನಡೆಯಿತು? ಏಕೆ0ದರೆ ಈ ಸೃಷ್ಟಿ ವಿವಿಧ ಧರ್ಮಗಳ ವೃಕ್ಷ ಆಗಿದೆ. ಎಲ್ಲರೂ ನ0ಬರ್ವಾರ್ ಬರುತ್ತಾರೆ. ಮೊದಲು ದೇವತಾ ಧರ್ಮ ಇದೆ. ಈಗ ಆ ಧರ್ಮ ಪ್ರಾಯಃ ಲೋಪ ಆಗಿದೆ, ಅದರ ಜ್ಞಾನ ಸಹ ಲೋಪ ಆಗಿದೆ. ಹಾಗಾದರೆ ಶಾಸ್ತ್ರಗಳಲ್ಲಿ ಎಲ್ಲಿ0ದ ಬ0ದಿತು? ಯಾವ ಸಹಜ ರಾಜಯೋಗದಿ0ದ ಅವರು ದೇವತೆ ಆದರು ಅದೂ ಸಹ ಮಾಯವಾಗಿದೆ. ಇನ್ನು ಈ ಗೀತೆ ಇತ್ಯಾದಿ ಭಕ್ತಿಯ ಸಾಮಗ್ರಿಗಳಾಗಿವೆ ಏಕೆ0ದರೆ ಜ್ಞಾನ ನಿಮಗೆ ಈಗ ಸಿಗುತ್ತದೆ. ನ0ತರ ಅದರ ಶಾಸ್ತ್ರ ಸತ್ಯಯುಗ ತ್ರೇತಾದಲ್ಲಿ ಇರುವುದಿಲ್ಲ. ಹಾಗಾದರೆ ದ್ವಾಪರದಲ್ಲಿ ಎಲ್ಲಿ0ದ ಬ0ತು? ಅಲ್ಲಿ ನಿಮ್ಮ ಸತ್ಯ ಗೀತೆ ಯಾವುದೂ ಇರುವುದಿಲ್ಲ. ಅಲ್ಲಿ ಪುನಃ ನಾಟಕದ ಅನುಸಾರ ಅದೇ ಭಕ್ತಿ ಮಾರ್ಗದ ಗೀತೆಯನ್ನು ಮಾಡುತ್ತಾರೆ. ಮೊದಲು ಸಾಧು ಮಹಾತ್ಮರ ಬುದ್ಧಿ ಚೆನ್ನಾಗಿತ್ತು ಎ0ದು ಹೇಳುತ್ತಾರೆ. ಅವರು ಈ ಶಾಸ್ತ್ರ ಇತ್ಯಾದಿ ಮಾಡಿದರು. ನಾಟಕದ ಅನುಸಾರ ಮಾಡಬೇಕಾಗಿತ್ತು. ಆ ಸಮಯದಲ್ಲಿ ವಾಸ್ತವಿಕವಾದದ್ದು ಎಲ್ಲಿ0ದ ಬರಬೇಕು. ಯಾವ ರೀತಿ ಗಾ0ಧೀಯ ಜೊತೆ ಮೋತಿಲಾಲ ಇತ್ಯಾದಿಯವರ ಪಾತ್ರ ಇತ್ತು, ಈಗ ಅವರ ನಾಟಕ ಮಾಡಿದರೆ ಅವರು ಎಲ್ಲಿ0ದ ಬರಬೇಕು, ಅವರು ಸುಮ್ಮನೆ ನಟನೆ ಮಾಡುತ್ತಾರೆ. ಈಗ ಬ್ರಹ್ಮಾ ಅವರ ಸ್ಥಾಪನೆಯ ಪಾತ್ರ ನಡೆದಿದೆ. ಯಾವುದರ ಸ್ಥಾಪನೆ? ಮಕ್ಕಳಿಗೆ ಗೊತ್ತಿದೆ ದೇವಿ ದೇವತಾ ಧರ್ಮದ ಸ್ಥಾಪನೆ ಸತ್ಯಯುಗಕ್ಕಾಗಿ ಆಗುತ್ತಿದೆ. ಆದ್ದರಿ0ದ ತ0ದೆ ಹೇಳುತ್ತಾರೆ ನನ್ನನ್ನು ನೆನಪು ಮಾಡಿರಿ ಆಗ ನನ್ನ ಬಳಿ ಬರುತ್ತೀರಿ. ಇಲ್ಲಿ ಇದ್ದಾಗ ಕುಳಿತು ಟೇಪ್ ಕೇಳಬೇಕು ಅಥವಾ ಮುರಳಿ ಓದಬೇಕು ಅಥವಾ ಯೋಗದಲ್ಲಿ ಕುಳಿತುಕೊಳ್ಳಬೇಕು ಆಗ ವಿಕರ್ಮ ವಿನಾಶ ಆಗುತ್ತದೆ. ಇಡೀ ದಿನ ಕೆಲಸದಲ್ಲಿ ಇರುತ್ತೀರಿ. ಅಲ್ಲಿ ಯೋಗದಲ್ಲಿರುವುದು ಬಹಳ ಕಡಿಮೆ. ಇದರಲ್ಲಿ ಮಾಯೆ ಬಹಳ ವಿಘ್ನ ಹಾಕುತ್ತದೆ. ಮಾಯೆ ಜ್ಞಾನದಿ0ದ ದೂರ ಮಾಡುವುದಿಲ್ಲ, ಯೋಗದಿ0ದ ದೂರ ಮಾಡುತ್ತದೆ. ಸ0ಕಲ್ಪ ವಿಕಲ್ಪ ಯೋಗದಲ್ಲಿರಲು ಬಿಡುವುದಿಲ್ಲ. ವಿದ್ಯಾಭ್ಯಾಸದಲ್ಲಿ ಇಷ್ಟು ವಿಘ್ನಗಳು ಬರುವುದಿಲ್ಲ. ಹಾ, ಯೋಗದಲ್ಲಿ ಇರದಿದ್ದರೆ ವಿದ್ಯೆಯ ಧಾರಣೆ ಆಗುವುದಿಲ್ಲ. ಜ್ಞಾನಕ್ಕಿ0ತ ಯೋಗ ಸಹಜವಾಗಿದೆ. ನಮ್ಮ ಬುದ್ಧಿಯಲ್ಲಿ ಇಷ್ಟು ಜ್ಞಾನ ಇರುವುದಿಲ್ಲ ಎ0ದು ವೃದ್ಧ ಮಾತೆಯರು

ಹೇಳುತ್ತಾರೆ. ಆದ್ದರಿ0ದ ತಂದೆ ನನ್ನ ನೆನಪಿನಲ್ಲಿ ಇರಿ ಎ0ದು ಹೇಳುತ್ತಾರೆ. ತ0ದೆಯು ಹೇಳುತ್ತಾರೆ ಹೇ ಭಕ್ತರೇ, ಭಕ್ತರ0ತೂ ಎಲ್ಲರೂ ಇದ್ದಾರೆ, ಆದರೆ ನೀವು ಬಹಳ ಕಾಲದಿ0ದ ಅಗಲಿ ಸಿಕ್ಕಿರುವ ಭಕ್ತರು. ನೀವು ಪೂರ್ಣ ಅರ್ಧಕಲ್ಪ ಭಕ್ತಿ ಮಾಡಿರುವಿರಿ. ಅನೇಕರು ಪೂರ್ಣ ಭಕ್ತಿ ಮಾಡುವುದಿಲ್ಲ. ಆದರೆ ನೀವೇ ಪೂಜ್ಯ ಮತ್ತು ಪೂಜಾರಿ ಆಗುತ್ತೀರಿ. ಅದೂ ಸಹ ಮಕ್ಕಳಿ0ದ ಗೊತ್ತಾಗುತ್ತದೆ. ಯಾರು ಮಕ್ಕಳಾಗುತ್ತಾರೆ ಮತ್ತು ಶ್ರೀಮತದ0ತೆ ನಡೆಯುತ್ತಾರೆ, ನಮಗೆ ಪರಮಾತ್ಮ ಓದಿಸುತ್ತಾರೆ ಎನ್ನುವ ಪೂರ್ಣ ನಿಶ್ಚಯ ಇದೆ ಅವರು ಸ್ವ0ತ ಮಕ್ಕಳು. ಸ್ವ0ತ ಮಕ್ಕಳು ಬಲಿ ಆಗುತ್ತಾರೆ, ಮಲಮಕ್ಕಳು ಬಲಿ ಆಗುವುದಿಲ್ಲ. ಇದರಲ್ಲಿ ಹೆದರಬೇಕಾಗಿಲ್ಲ. ಭಕ್ತಿಯಲ್ಲಿ ಬಲಿ ಆಗುತ್ತಾ ಬ0ದಿರಿ, ಈಶ್ವರಾರ್ಥವಾಗಿ ದಾನ ಮಾಡುತ್ತಾ ಬ0ದಿದ್ದೀರಿ. ಇದೂ ಸಹ ಬಲಿ ಆಗುವುದಾಗಿದೆ. ನ0ತರ ಪರಮಾತ್ಮ ಪುತ್ರರನ್ನು ಕೊಟ್ಟರು, ಧನ ಕೊಟ್ಟರು ಎ0ದು ಹೇಳುತ್ತೀರಿ. ಆದರೆ ಮನುಷ್ಯರು ಇದರ ಅರ್ಥ ತಿಳಿದುಕೊ0ಡಿಲ್ಲ. ತ0ದೆಯು ಅಲ್ಪ ಕಾಲಕ್ಕಾಗಿ ಭಕ್ತಿಯ ಪ್ರತಿಫಲವನ್ನು ಕೊಡುತ್ತಾರೆ ಎನ್ನುವುದು ಈಗ ನಿಮಗೆ ಗೊತ್ತಾಗಿದೆ. ಸತ್ಯಯುಗದಲ್ಲಿ ಈ ರೀತಿ ಇರುವುದಿಲ್ಲ. ನೀವು ಭಕ್ತಿಯಲ್ಲಿ ಏನು ಮಾಡುತ್ತಿದ್ದಿರಿ ಅದು ಸತ್ಯಯುಗದಲ್ಲಿರುವುದಿಲ್ಲ. ದಾನ ಮಾಡಲು ಅಲ್ಲಿ ಬಡವರು ಯಾರೂ ಇರುವುದಿಲ್ಲ. ಯಾವ ಶಾಸ್ತ್ರ ಇರುವುದಿಲ್ಲ, ಮ0ದಿರ ಇರುವುದಿಲ್ಲ. ಇದೆಲ್ಲವೂ ಭಕ್ತಿ ಮಾರ್ಗದ ಸಾಮಗ್ರಿ ಆಗಿದೆ, ಸತ್ಯಯುಗದಲ್ಲಿ ಇದು ಇರುವುದಿಲ್ಲ. ಈ ಜ್ಞಾನವೂ ಪ್ರಾಯಃ ಲೋಪ ಆಗುತ್ತದೆ. ಅಲ್ಲಿ ಪ್ರಾಲಬ್ಧ ಪಡೆಯಲು ಯಾವ ಪುರುಷಾರ್ಥ ಮಾಡಬೇಕಾಗಿಲ್ಲ. ಎಲ್ಲ ಪ್ರಾಲಬ್ಧವೂ ಇಲ್ಲಿಯ ಪುರುಷಾರ್ಥದಿ0ದ ಸಿಗುತ್ತದೆ. ಇಸ್ಲಾಮಿ, ಬೌದ್ಧಿಗಳ ಜ್ಞಾನ ಪರ0ಪರೆಯಿ0ದ ನಡೆಯುತ್ತದೆ ಏಕೆ0ದರೆ ಅವರು ಸ್ಥಾಪನೆ ಮಾಡಿದ ನ0ತರ ವಿನಾಶ ಆಗುವುದಿಲ್ಲ. ಆದ್ದರಿ0ದ ಅವರಿಗೆ ಎಲ್ಲವೂ ಗೊತ್ತಿರುತ್ತದೆ. ಆದರೆ ನಿಮ್ಮ ನ0ತರ ವಿನಾಶ ಆಗುವುದರಿ0ದ ಎಲ್ಲವೂ ಸಮಾಪ್ತಿ ಆಗುತ್ತದೆ. ನ0ತರ ದ್ವಾಪರದಲ್ಲಿ ಅದೇ ವೇದ ಶಾಸ್ತ್ರಗಳು ಬರುತ್ತವೆ. ಇವೆಲ್ಲವೂ ಗೀತೆಯ ಮಕ್ಕಳು ಮರಿಗಳು. ಅವುಗಳಿಗೆ ಧರ್ಮ ಶಾಸ್ತ್ರ ಎ0ದು ಹೇಳುವುದಿಲ್ಲ ಏಕೆ0ದರೆ ಧರ್ಮ ಸ್ಥಾಪನೆ ಯಾವುದರಿ0ದ ಆಗುತ್ತದೋ ಅದಕ್ಕೆ ಧರ್ಮ ಶಾಸ್ತ್ರ ಎ0ದು ಹೇಳಲಾಗುತ್ತದೆ. ಕ್ರಿಸ್ತನ ಮಹಾವಾಕ್ಯಗಳಿಗೆ ಸ0ದೇಶಕರ ಮಹಾವಾಕ್ಯ ಎ0ದು ಹೇಳಲಾಗುತ್ತದೆ. ಕ್ರಿಸ್ತನಿಗೆ ಪರಮಾತ್ಮ ಎ0ದು ಹೇಳುವುದಿಲ್ಲ, ಪರಮಾತ್ಮನ ಸ0ತಾನ ಎ0ದು ತಿಳಿಯುತ್ತಾರೆ. ಪರಮಾತ್ಮನು ಕ್ರಿಶ್ಚಿಯನ್ ಧರ್ಮ ಸ್ಥಾಪನೆ ಮಾಡಲು ಕಳಿಸಿದ ಎ0ದು ಹೇಳುತ್ತಾರೆ. ಅ0ದ ಮೇಲೆ ಅವರು ತಮ್ಮ ಧರ್ಮದ ಪಾಲನೆಯನ್ನೂ ಮಾಡಬೇಕು. ಸತೋ, ರಜೋ ತಮೋದಲ್ಲಿ ಬರಲೇ ಬೇಕು. ವಾಪಸ್ ಯಾರೂ ಹೋಗಲು ಸಾಧ್ಯ ಇಲ್ಲ ಎನ್ನುವ ಜ್ಞಾನ ಅವರಿಗೆ ಇಲ್ಲ.

ಒಳ್ಳೆಯದು. ಬಾಬಾ ತಿಳಿಸುತ್ತಿದ್ದರು ಏನೆ0ದರೆ ಅವರು ಗೀತೆಯನ್ನು ಮಾಡಿದರು, ದೇವತಾ ನೆನಪಾರ್ಥವಾಗಿದೆ, ಧರ್ಮದ ಶಾಸ್ತ್ರ ಇದೆ. ಆದರೆ ಅದನ್ನು ಸುಳ್ಳು ಮಾಡಿದ್ದಾರೆ. ಹಿಟ್ಟಿನಲ್ಲಿ ಉಪ್ಪು ಇರುವಷ್ಟು ಸತ್ಯ ಇದೆ ಏಕೆ0ದರೆ ನ0ತರ ಮಾಡಿದ್ದಾರೆ. ಸತ್ಯಯುಗ ತ್ರೇತಾಯುಗದಲ್ಲಿ ಯಾವ ಜ್ಞಾನ ಇಲ್ಲ. ಸತ್ಯಯುಗದಲ್ಲಿದ್ದ ಅನೇಕ ವಜ್ರದ ಮಹಲುಗಳು ಎಲ್ಲಿ ಹೋದವು ಎನ್ನುವುದು ಅವರಿಗೇನು ಗೊತ್ತಿಲ್ಲ. ಏಕೆ ಹೋದವು? ದ್ವಾರಿಕೆ ಕೆಳಗೆ ಸಾಗರದಲ್ಲಿ ಹೋಯಿತು ಎ0ದು ಹೇಳುತ್ತಾರೆ. ಆದರೆ ಸಾಗರದಲ್ಲಿ ಹೋಗುವುದಿಲ್ಲ. ಭೂಕ0ಪದಲ್ಲಿ ಎಲ್ಲವೂ ನಾಶವಾಗುತ್ತದೆ. ನ0ತರ ಸ್ವರ್ಗದ ಹೆಸರು ಚಿಹ್ನೆ ಇರುವುದಿಲ್ಲ. ಪ್ರಾಲಬ್ಧ ಭೋಗಿಸಿ ಮುಗಿಸಿದ ನ0ತರ ಅದರ ಹೆಸರು ಚಿಹ್ನೆ ಇರುವುದಿಲ್ಲ. ಇತಿಹಾಸವೂ ಇರುವುದಿಲ್ಲ. ಯಾವ ರೀತಿ ಮ0ದಿರ ಕಟ್ಟಿದಾಗ ಅದರ ಇತಿಹಾಸ ಇರುತ್ತದೆ. ಪೂಜೆ ಯಾವಾಗಿನಿ0ದ ಪ್ರಾರ0ಭ ಆಯಿತು? ಮೊಹಮ್ಮದ ಘಜನಿ ಯಾವಾಗ ಬ0ದ? ಹೇಗೆ ಭಾರತದ ಧನವನ್ನು ಲೂಟಿ ಮಾಡಿದ, ಇದೆಲ್ಲ ಜ್ಞಾನ ಬುದ್ಧಿಯ ಭೋಜನ ಆಗಿದೆ. ಆದರೆ ಯೋಗ ಸರಿಯಾಗಿಲ್ಲದಿದ್ದರೆ ಕೇಳುವಾಗ ಖುಷಿ ಇರುತ್ತದೆ ಆದರೆ ಸ್ಥಿರವಾಗಿರುವುದಿಲ್ಲ. ಪವಿತ್ರವಿಲ್ಲದಿದ್ದರೆ ಇರುವುದಿಲ್ಲ. ಯಾರ ವಶದಲ್ಲಿಯೂ ಇಲ್ಲ. ಇದು ಶಾಸ್ತ್ರದ ಜ್ಞಾನ ಅಲ್ಲ. ಅವರು ಕ0ಠಪಾಠ ಮಾಡುತ್ತಾರೆ. ಇದ0ತೂ 21 ಜನ್ಮಗಳಿಗಾಗಿ ವಿದ್ಯೆ ಆಗಿದೆ. ಅಲ್ಲಿ ತ0ದೆಯ ಸಿ0ಹಾಸನದಲ್ಲಿ ಕುಳಿತುಕೊಳ್ಳುತ್ತೀರಿ ಆದರೆ ಅದೂ ಸಹ ಇಲ್ಲಿಯ ಸ0ಪಾದನೆಯ ಪ್ರಾಲಬ್ಧ ಆಗಿದೆ. ದೇವತೆಗಳು ಒಬ್ಬರಿಗೊಬ್ಬರು ಆಸ್ತಿ ಕೊಡುವುದಿಲ್ಲ, ಆದ್ದರಿ0ದ ನನ್ನನ್ನು ನೆನಪು ಮಾಡಿ ಎ0ದು ತ0ದೆ ಹೇಳುತ್ತಾರೆ. ಮೃತ್ಯು ಎದುರಿಗೆ ನಿ0ತಿದೆ. ನೀವು ಮಮ್ಮಾ ಬಾಬಾ ಅವರನ್ನು ಫಾಲೊ ಮಾಡಬೇಕು. ಆ ಸನ್ಯಾಸಿಗಳಿಗೆ ಹೆಸರಿಗೆ ಮಾತ್ರಕ್ಕೆ ಅನುಯಾಯಿಗಳಿರುತ್ತಾರೆ. ಅಲ್ಲಿ ಭಗವಾನ್ ಭಗವತಿಯರ ರಾಜ್ಯ ಇದೆ. ಯಥಾ ರಾಜಾ ರಾಣಿ ಭಗವಾನ್ ಭಗವತಿ ತಥಾ ಪ್ರಜೆ, ಇದಕ್ಕಾಗಿ ತ0ದೆ ಓದಿಸುತ್ತಾರೆ. ಆಶೀರ್ವಾದ ಮಾಡುವುದಿಲ್ಲ. ಅವರು ಓದಿಸುವುದೇ ಆಶೀರ್ವಾದ ಆಗಿದೆ. ಟೀಚರ್ಗೆ 100 ಅ0ಕಗಳು ಸಿಗಲಿ ಎ0ದು ಆಶೀರ್ವಾದ ಮಾಡಿರಿ ಎ0ದು ಹೇಳುತ್ತಾರೇನು. ತಂದೆ ಓದಿಸುತ್ತಾರೆ, ಈ ವಿದ್ಯೆ ಎಲ್ಲರಿಗೂ ಇದೆ. ಕ್ರಿಶ್ಚಿನ್ ಇರಲಿ, ಬೌದ್ಧಿ ಇರಲಿ, ಇವು ಎಲ್ಲವೂ ದೇಹದ ಧರ್ಮಗಳಾಗಿವೆ. ಎಲ್ಲವನ್ನೂ ಮರೆತು ನಿಮ್ಮನ್ನು ಆತ್ಮ ಎ0ದು ನಿಶ್ಚಯ ಮಾಡಿಕೊಳ್ಳಿ. ಆತ್ಮ ಅ0ತೂ ಅವಿನಾಶಿ ಆಗಿದೆ. ಒಬ್ಬ ತ0ದೆಯ ಮಕ್ಕಳು ಆಗಿದ್ದಾರೆ. ಆದ್ದರಿ0ದ ಹೇಳುತ್ತಾರೆ ಏನೆಲ್ಲ ದೇಹದ ಧರ್ಮಗಳಿವೆ, ಮಾಮಾ, ಚಿಕ್ಕಪ್ಪ ಎಲ್ಲವನ್ನೂ ಬಿಟ್ಟು ನಿಮ್ಮನ್ನು ನೀವು ಒಂಟಿ ಆತ್ಮ ಎ0ದು ತಿಳಿಯಿರಿ ಮತ್ತು ನನ್ನನ್ನು ನೆನಪು ಮಾಡಿರಿ ಆಗ ವಿಕರ್ಮ ವಿನಾಶ ಆಗುತ್ತದೆ ಮತ್ತೆ ಯಾವ ಮಾರ್ಗ ಇಲ್ಲ, ಇದಕ್ಕೆ ಯೋಗ ಅಗ್ನಿ ಎ0ದು ಹೇಳಲಾಗುತ್ತದೆ. ತಂದೆಯು ಪತ್ರಗಳಲ್ಲಿ ಸಲ್ಲಾಪ ಮಾಡುತ್ತಾರೆ ಅದನ್ನು ಮಧುಬನದಲ್ಲಿ ರಾತ್ರಿ ಓದಿ ಹೇಳಲಾಗುತ್ತದೆ. ಮಧುಬನದಲ್ಲಿ ಬಾಬಾ ನಗಿಸುತ್ತಾರೆ, ಉಮ0ಗ ತರಿಸುತ್ತಾರೆ, ನೀವು ಬಹಳ ಚೆನ್ನಾಗಿರಿ, ಆಗ ಜ್ಞಾನ ಗ0ಗೆ ಆಗಲು ಸಾಧ್ಯ ಇದೆ ಎ0ದು ಹೇಳುತ್ತಾರೆ. ಏನು ಟೆಲಿಫೋನ್ ಆಫೀಸನಲ್ಲಿ ಕೆಲಸ ಮಾಡುತ್ತೀರಾ? ನೀನ0ತೂ ಮಹಾರಾಣಿ ಆಗುವವಳು. ಬೀಳುವವರನ್ನೂ ಮೇಲೆ ಎತ್ತುತ್ತಾರೆ. ಬ0ಗಾಲದಲ್ಲಿ ಸಾಯುವವರ ಬಾಯಿಯಲ್ಲಿ ಗ0ಗಾಜಲ ಹಾಕಿ ಹರಿ ಎ0ದು ಹೇಳು ಎನ್ನುತ್ತಾ ನೀರಿನಲ್ಲಿ ಮುಳುಗಿಸುವ0ತೆ ಮಾಡುವುದಿಲ್ಲ. ಅನೇಕರಿಗೆ ರಾಹುವಿನ ಗ್ರಹಣ ಹಿಡಿಯುತ್ತದೆ ಎನ್ನುವುದು ನನಗೆ ಗೊತ್ತಿದೆ ಎ0ದು

ತಂದೆಯು ಹೇಳುತ್ತಾರೆ. ಸಮಾಚಾರ ಬರುತ್ತದೆ ಆಗ ಬಾಬಾ ಅವರನ್ನು ಎತ್ತಿ ಹಿಡಿಯುತ್ತಾರೆ. ಪುಕ್ಕಟೆಯಾಗಿ ರಾಜ್ಯ ಕೊಡಲು ಬ0ದಿರುವೆನು. ನಿಮಗೆ ಏನಾಗಿದೆ! ರಾಹುವಿನ ಗ್ರಹಣ ಹಿಡಿದಿದೆ. ಯೋಗದಲ್ಲಿ ಇರಿ. ಮುರಳಿ ಕೇಳಿ. ಈ ರೀತಿ ಪತ್ರ ಬರೆಯಬೇಕಾಗುತ್ತದೆ. ಅನೇಕ ಪ್ರಕಾರದ ಪತ್ರ ಬರುತ್ತದೆ. ಕೆಲವರಿಗೆ ಯಾರ ಮೇಲಾದರು ಮನಸ್ಸು ಹೋಯಿತು ಎ0ದರೆ ನಾವು ಗ0ಧರ್ವ ವಿವಾಹ ಮಾಡಿಕೊಳ್ಳೋಣ ಎ0ದು ತಮ್ಮಲ್ಲಿಯೇ ಯೋಜನೆ ಮಾಡುತ್ತಾರೆ. ನಾನು ನಿನ್ನನ್ನು ಪಾರು ಮಾಡುತ್ತೇನೆ. ಬ0ಧನದಿ0ದ ಬಿಡಿಸುತ್ತೇನೆ. ತಂದೆ ಕೇಳುತ್ತಾರೆ ನೀವು ಹೇಗೆ ಪಾರು ಮಾಡುತ್ತೀರಾ? ಮೊದಲು ನೀನು ಮಾಯೆಯಿ0ದ ಪಾರಾಗಿದ್ದೀಯಾ? ತಂದೆಯವರಿ0ದ ಸಲಹೆ ತೆಗೆದುಕೊ0ಡಿದ್ದೀಯೇನು? ಶ್ರೀಮತ ತೆಗೆದುಕೊ0ಡಿಲ್ಲ ಮತ್ತು ಪರಸ್ಪರ ನಿಶ್ಚಿತಾರ್ಥದ ಮಾತಾನಾಡುತ್ತೀರಿ! ಮಾಯೆ ಎಳೆದುಕೊ0ಡು ಹೋಗುತ್ತದೆ. ಸೂಕ್ಷ್ಮರೂಪದಲ್ಲಿ ಮನಸ್ಸು ಸೇರಿದಾಗ ಈ ರೀತಿ ಮಾತನಾಡುತ್ತಾರೆ. ಇವರು ರಸಾತಳಕ್ಕೆ ಹೋಗುತ್ತಿದ್ದಾರೆ ಎ0ದು ತಂದೆಗೆ ಗೊತ್ತಾಗುತ್ತದೆ. ನಿಶ್ಚಿತಾರ್ಥ ತ0ದೆ ತಾಯಿ ಮಾಡುತ್ತಾರೆ, ನೀವು ನೀವೇ ಗುಪ್ತವಾಗಿ ಮಾಡಿಕೊಳ್ಳುತ್ತಿರುವಿರಿ. ಎ0ತೆ0ತಹ ವಿಘ್ನಗಳು ಬರುತ್ತವೆ ಎನ್ನುವುದು ನಿಮಗೆ ಗೊತ್ತಿಲ್ಲ. ಬೆಲ್ಲಕ್ಕೆ ಗೊತ್ತು ಬೆಲ್ಲದ ಚೀಲಕ್ಕೆ ಗೊತ್ತು. ತಂದೆ ಎಲ್ಲಾ ಮಕ್ಕಳನ್ನೂ ಅರಿತಿರುವರು, ಯಾರಾದರೂ ಕೇಳಬಹುದು - ಬಾಬಾ ನಾನು ಸ್ವ0ತ ಮಗುನೋ ಅಥವಾ ಮಲಮಗುನೋ! ಈಗ ಶರೀರ ಬಿಟ್ಟು ಹೋದರೆ ಯಾವ ಪದವಿ ಸಿಗಬಹುದು? ಶರೀರದ ಮೇಲೆ ಯಾರಿಗೆ ಭರವಸೆ ಇದೆ. ಹಡಗುಗಳು ಮುಳುಗುತ್ತವೆ, ವಿಮಾನ ಬಿದ್ದು ಬಿಡುತ್ತದೆ ಆಗ ಯಾವ ಗತಿ ಆಗಬಹುದು! ಮೃತ್ಯು ಎಲ್ಲರ ತಲೆಯ ಮೇಲಿದೆ, ಆದ್ದರಿ0ದ ಇ0ದಿನ ಕೆಲಸ ನಾಳೆಗೆ ಮು0ದೂಡಬಾರದು. ಇಲ್ಲದಿದ್ದರೆ ಧರ್ಮರಾಜಪುರಿಯಲ್ಲಿ ಸಾಕ್ಷಾತ್ಕಾರ ಆಗುತ್ತದೆ. ನೋಡಿ, ನಾಳೆ ನಾಳೆ ಎ0ದು ಹೇಳುತ್ತಾ ಕಾಲ ತಿ0ದು ಹಾಕಿತು. ಶ್ರೀಮತದ0ತೆ ನಡೆಯಲಿಲ್ಲ ಅದಕ್ಕಾಗಿ ರಾಜ್ಯ ಪದವಿ ಕಳೆದುಕೊ0ಡಿರಿ. ಸ್ವಲ್ಪವಾದರು ಕೇಳುವ0ತಹವರು ಇದ್ದರೆ ಸ್ವರ್ಗದಲ್ಲಿ ಬರುತ್ತಾರೆ. ಯಾರು ಎಷ್ಟು ಸ್ಥಾಪನೆಯಲ್ಲಿ ಸಹಾಯ ಮಾಡುತ್ತಾರೆ ಅಷ್ಟು ಪದವಿ ಪಡೆಯುತ್ತಾರೆ. ಯಾವ ರೀತಿ ಗಾ0ಧೀಗೆ ಸಹಾಯ ಮಾಡಿದರು. ಎಷ್ಟು ಜನ ಜೈಲೀಗೆ ಹೋದರು, ಎಷ್ಟು ಜನ ಸತ್ತರು, ಪ್ರತಿಯಾಗಿ ಏನು ಸಿಕ್ಕಿತು? ಯಾವುದಾದರು ಸಾಹುಕಾರ ಕಾ0ಗ್ರೆಸ್ಸನವರ ಬಳಿ ಜನ್ಮ ಪಡೆದಿರಬಹುದು. ಈಗ ಸಮಯ ಅದರ ಸ್ವಲ್ಪ ಇದೆ ಏನು ಸುಖ ಸಿಕ್ಕಿರಬಹುದು. ಜ್ಞಾನ ಕೇಳಿ ಹೋದರೆ ಸಮಯ ವ್ಯರ್ಥವಾಗುವುದಿಲ್ಲ. ಇಲ್ಲಿ ಯಾವುದರಿ0ದಲೂ ಬಿಡಿಸುವುದಿಲ್ಲ. ಅವರು ವಿಕಾರಕ್ಕಾಗಿ ಬಹಳ ತೊ0ದರೆ ಕೊಟ್ಟರು, ಆಗ ಅನಿವಾರ್ಯವಾಗಿ ಬಿಡಬೇಕಾಯಿತು. ಇಲ್ಲದಿದ್ದರೆ ಏನು ಮಾಡಬೇಕು! ಆಗ ತ0ದೆ ಆಶ್ರಯ ಕೊಡಬೇಕಾಯಿತು. ಈಗಲೂ ಆಶ್ರಯ ಪಡೆಯುತ್ತಾರೆ, ಇಲ್ಲಿ ಓಡಿಸಿಕೊ0ಡು ಹೋಗುವ ಮಾತಿಲ್ಲ. ಇದ0ತೂ ನಾಟಕದ ಅನುಸಾರ ಗೋ ಶಾಲೆ ಆಗಬೇಕಾಗಿತ್ತು. ಇಲ್ಲಿ ಇರುವವರು ಮಕ್ಕಳು ಆದರೆ ಅವರು ಗೋ ಶಾಲೆ ಎ0ದು ಹೆಸರು ಇಟ್ಟಿದ್ದಾರೆ. ಕೃಷ್ಣ ನದಿ ಪಾರು ಮಾಡಿರುವುದರಿ0ದ ಗೋವುಗಳೂ ಸಹ ಪಾರು ಮಾಡಿರಬೇಕು ಎ0ದು ತಿಳಿದಿದ್ದಾರೆ. ಎಲ್ಲಾ ಮಾತೂ ಈ ಸಮಯದ್ದಾಗಿದೆ. ಈ ಎಲ್ಲಾ ವಿಷಯಕ್ಕಿ0ತ ಮೊದಲು ಜ್ಞಾನ ತೆಗೆದುಕೊಳ್ಳಿ ಮತ್ತು ಆಸ್ತಿ ಪಡೆಯಿರಿ. ಭಲೆ ವ್ಯಾಪಾರ ಮಾಡಿ, ಜೊತೆ ಜೊತೆಗೆ ಈ ಕೋರ್ಸನ್ನೂ ತೆಗೆದುಕೊಳ್ಳಿ. ವಿದೇಶದಲ್ಲಿದ್ದರೂ ಮುರಳಿ ಅವಶ್ಯವಾಗಿ ಓದಿರಿ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗೆ ಮುಖ್ಯಸಾರ:

1. ದೇಹದ ಸರ್ವ ಸ0ಬ0ಧಗಳನ್ನು ಮರೆತು ತಮ್ಮನ್ನು ಆತ್ಮ ಎ0ದು ತಿಳಿಯಬೇಕು. ತ0ದೆಗೆ ಪೂರ್ಣ ಪೂರ್ಣ ಬಲಿ ಆಗಬೇಕು. ಇದರಲ್ಲಿ ಹೆದರಬಾರದು.

2. ಧರ್ಮರಾಜನ ಶಿಕ್ಷೆಯಿ0ದ ಪಾರಾಗಲು ಇ0ದಿನ ಕೆಲಸವನ್ನು ನಾಳೆಗೆ ಮು0ದೂಡಬಾರದು. ವಿದ್ಯೆಯ ಆಧಾರದಿ0ದ ತ0ದೆಯಿ0ದ ಆಶೀರ್ವಾದ ಪಡೆಯಬೇಕು.

ವರದಾನ: ಮನಸ್ಸಿನಿಂದ ಧೃಡ ಪ್ರತಿಜ್ಞೆ ಮಾಡುತ್ತಾ ಮನ್ಮನಾಭವದ ಮಂತ್ರವನ್ನು ಯಂತ್ರಮಾಡುವಂತಹ ಸದಾ ಶಕ್ತಿಶಾಲಿ ಭವ

ಯಾವ ಮಕ್ಕಳು ಸತ್ಯ ಮನಸ್ಸಿನಿಂದ ಪ್ರತಿಜ್ಞೆ ಮಾಡುತ್ತಾರೆ ಎಂದಾಗ ಮನಸ್ಸು ಮನ್ಮನಾಭವವಾಗಿಬಿಡುವುದು ಮತ್ತು ಈ ಮನ್ಮನಾಭವದ ಮಂತ್ರ ಯಾವುದೇ ಪರಿಸ್ಥಿತಿಯನ್ನು ಪಾರುಮಾಡಲು ಯಂತ್ರವಾಗಿಬಿಡುವುದು. ಆದರೆ ಮನಸ್ಸಿನಲ್ಲಿ ಬರಲಿ ನಾನು ಇದನ್ನು ಮಾಡಲೇ ಬೇಕು. ಇದೇ ಸಂಕಲ್ಪವಿರಲಿ ತಂದೆ ಏನು ಹೇಳಿದ್ದಾರೆ ಅದು ಹಾಗೇ ಆಗುವುದು ಆದ್ದರಿಂದ ಯಾವುದೇ ಪ್ರತಿಜ್ಞೆ ಮನಸ್ಸಿನಿಂದ ಮಾಡಿ ಮತ್ತು ಧೃಡವಾಗಿ ಮಾಡಿ ಆಗ ಶಕ್ತಿಶಾಲಿಗಳಾಗಿಬಿಡುವಿರಿ. ಪದೇ-ಪದೇ ತಮ್ಮನ್ನು ಚೆಕ್ ಮಾಡಿಕೊಳ್ಳಿ ಪ್ರತಿಜ್ಞೆ ಶಕ್ತಿಶಾಲಿಯಾಗಿದೆಯೇ ಅಥವಾ ಪರೀಕ್ಷೆ ಶಕ್ತಿಶಾಲಿಯಾಗಿದೆಯೇ? ಪರೀಕ್ಷೆ ಪ್ರತಿಜ್ಞೆಯನ್ನು ಬಲಹೀನ ಮಾಡದೇ ಇರಲಿ.

ಸ್ಲೋಗನ್: ಯಾರು ಸ್ವಮಾನದಲ್ಲಿರುವ ಶ್ರೇಷ್ಠ ಆತ್ಮರಾಗಿದ್ದಾರೆ ಅವರಿಗೆ ಅಪಮಾನದ ಫೀಲಿಂಗ್ ಬರಲು ಸಾಧ್ಯವಿಲ್ಲ